ಕೃಷಿ ಸಂಶೋಧಕರು ಹಾಗೂ ರೈತರ ಮಧ್ಯೆ ಇರುವ ಅಂತರವನ್ನು ರೈತ ತೀರ್ಪು ಸ್ಪಷ್ಟವಾಗಿ ಗುರುತಿಸಿದೆ. ಪ್ರಸ್ತುತ ಸಂಶೋಧನೆ ಎಂದರೆ ಅತಿ ಹೆಚ್ಚು ಒಳಸುರಿ ಹಾಗೂ ರಾಸಾಯನಿಕಗಳನ್ನು ಬೇಡುವಂಥದು ಎಂಬಂತಾಗಿದೆ. ಇದು ರೈತರು ಸಂಪೂರ್ಣವಾಗಿ ಪರಾವಲಂಬಿ ಹಾಗೂ ಅಸಹಾಯಕರನ್ನಾಗಿ ಮಾಡಿದೆ.

ಸರ್ಕಾರದಿಂದ ಅನುದಾನ ಪಡೆಯುವ ಕೃಷಿ ವಿಶ್ವವಿದ್ಯಾಲಯಗಳು, ಬಹುರಾಷ್ಟ್ರೀಯ ಕಂಪನಿಗಳ ಧನಸಹಾಯದ ಸಂಶೋಧನೆಗಳನ್ನು ತಿರಸ್ಕರಿಸಬೇಕು.

ಸಣ್ಣ ಹಾಗೂ ಅತಿ ಸಣ್ಣ ರೈತರಲ್ಲಿ ಜಾಗೃತಿ ಮೂಡಿಸುವಲ್ಲಿ ರೈತ ತೀರ್ಪು ಉತ್ತಮ ವೇದಿಕೆ ಕಲ್ಪಿಸಿದೆ. ಆಡಳಿತಗಾರರು ಹಾಗೂ ಸಂಶೋಧಕರು ರೈತರ ಅಭಿಪ್ರಾಯಗಳಿಗೆ ಒತ್ತು ನೀಡಬೇಕು.

ರೈತ ಚಳವಳಿಗಳಿಗೆ ಬೌದ್ಧಿಕ ಪರಿಕಲ್ಪನೆಯನ್ನು ರೈತ ತೀರ್ಪು ಕೊಡಬಲ್ಲದು. ರೈತ ತೀರ್ಪು ಇನ್ನಷ್ಟು ಪರಿಣಾಮಕಾರಿಯಾಗಲು ಇದನ್ನು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕು. ರೈತ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು, ಜನಪರ ಚಳವಳಿಗಳು ಹಾಗೂ ಮಾಧ್ಯಮಗಳು ಇದಕ್ಕೆ ಹೆಚ್ಚು ಹೆಚ್ಚು ಪ್ರಚಾರ ನೀಡಿ, ರೈತರಲ್ಲಿ ಜಾಗೃತಿ ಮೂಡಿಸಲು ಮುಂದಾಗಬೇಕು.

ಕರ್ನಾಟಕ ರಾಜ್ಯ ರೈತ ಸಂಘವು ಸಾಂಪ್ರದಾಯಿಕ ಬೀಜ ಹಾಗೂ ಸುಸ್ಥಿರ ಕೃಷಿ ಬಗ್ಗೆ ದೃಢ ನಿಲುವು ತಳೆಯಬೇಕಿದೆ.

ಸಂಶೋಧನೆಯಿಂದ ಉಂಟಾದ ಪರಿಣಾಮಗಳನ್ನು ರೈತರು ಮೌನವಾಗಿ ಅನುಭವಿಸುತ್ತಿದ್ದಾರೆಯೇ ಹೊರತೂ, ಸಂಶೋಧಕರನ್ನು ಪ್ರಶ್ನಿಸುತ್ತಿಲ್ಲ.

ರೈತ ತೀರ್ಪು ಕೇವಲ ರೈತ ಚಳವಳಿಗೆ ಹೊಸ ದಿಕ್ಕು ಮಾತ್ರವೊಂದನ್ನೇ ನೀಡಲಿಲ್ಲ;  ಬದಲಾಗಿ ಇಡೀ ಸಮುದಾಯಕ್ಕೆ ವಿಭಿನ್ನ ದಿಕ್ಕು ತೋರಿದೆ. ಕೃಷಿ ಕ್ಷೇತ್ರದ ಆರೋಗ್ಯಕರ ಹಾಗೂ ಆಶಾದಾಯಕ ಬೆಳವಣಿಗೆಯನ್ನು

ನಮಗೆ ನೀಡಿದೆ.

ರೈತರ ಮಾರ್ಗದರ್ಶನದಲ್ಲೇ ರೈತರ ಸಹಯೋಗದೊಂದಿಗೆ ಎಲ್ಲ ನೀತಿಗಳೂ ರೂಪುಗೊಳ್ಳಬೇಕು. ಸರ್ಕಾರ ತೆಗೆದುಕೊಳ್ಳುವ ರೈತವಿರೋಧಿ ನೀತಿಗಳನ್ನು ವಿರೋಧಿಸುವ ಹಕ್ಕು ರೈತರಿಗೆ ಇರಬೇಕು.

ರೈತ ತೀರ್ಪುಗಳ ಅನುಷ್ಠಾನವಾಗಬೇಕು. ರೈತ ಚಳವಳಿಗಳನ್ನು ಬಲಿಷ್ಠಗೊಳಿಸುವುದರಿಂದ ಇದನ್ನು ಮಾಡಲು ಸಾಧ್ಯ. ಚಳವಳಿಗಳಿಗೆ ರೈತ ತೀರ್ಪು ಬೌದ್ಧಿಕ ದಿಕ್ಕು ದೆಸೆ ನೀಡಬಲ್ಲದು. ಇಂಥ ಚಳವಳಿಗಳ ಅಗತ್ಯಕ್ಕೆ ದುಂಡುಮೇಜು ಒತ್ತು ನೀಡಿದೆ.

ರೈತ ತೀರ್ಪನ್ನು ಪ್ರತಿಯೊಂದು ಹಳ್ಳಿಗಳ ಮಟ್ಟಕ್ಕೆ ತೆಗೆದುಕೊಂಡು ಹೋಗಿ, ಚರ್ಚಿಸಬೇಕು. ಎಲ್ಲ ರೈತ ಸಂಘಟನೆಗಳೂ ಇದನ್ನು ಮುಂದಕ್ಕೆ ತೆಗೆದುಕೊಂಡು ಹೋಗಬೇಕಿದೆ.

ಕೃಷಿ ಉತ್ಪನ್ನ ಹಾಗೂ ಆಹಾರ ಉತ್ಪನ್ನಗಳನ್ನು ಬೆಲೆಯೇರಿಕೆ ಸೂಚ್ಯಂಕ ದಿಂದ ಹೊರತಾಗಿಸಬೇಕು.

ಸಂಶೋಧನೆಗಳಲ್ಲಿ ಪಾಲ್ಗೊಳ್ಳಲು ಯುವ ರೈತರಿಗೆ ಅವಕಾಶ ನೀಡಬೇಕು.

–೦–